# ಸಾವು-ನೋವು ಮತ್ತು ಸುದ್ದಿ...

ದೀಪಾವಳಿಯ ದಿನ ಬೆಳಿಗ್ಗೆ ಸರ್ಕಲ್ಲಿನ ನಾಲ್ಕೂ ಕೂಡುರಸ್ತೆಗಳ ಎರಡೂ ಬದಿಗಳಲ್ಲೂ ಹೂವು-ಹಣ್ಣು, ಮಾವಿನ ಸೊಪ್ಪು, ಬಾಳೆಲೆ ವ್ಯಾಪಾರ ಜೋರಾಗಿ ನಡೆದಿತ್ತು. ಚಳಿ ಇನ್ನೂ ದಿನದ ಮೈ ಬಿಟ್ಟಿರಲಿಲ್ಲ. ನಾನು ಬ್ಯಾಗಿನೊಂದಿಗೆ ಆಟೋ ಸ್ಟಾಂಡ್ ಕಡೆಗೆ ನಡೆದೆ. ನನ್ನ ಬಸ್ ಬಂದು ಸೇರಿದ್ದು ಸ್ವಲ್ಪ ಲೇಟಾಗಿತ್ತು. ಇಷ್ಟು ಹೊತ್ತಿಗಾಗಲೇ ನನ್ನಜ್ಜಿ ಪುಟುಪುಟು ಒಳಗೂ ಹೊರಗೂ ಓಡಾಡುತ್ತ, ನೀರೊಲೆಗೆ ಉರಿಹಾಕಿ, ತಾಮ್ರದ ಪಾತ್ರೆಗಳಿಗೆಲ್ಲ ಹುಳಿಹಚ್ಚಿಟ್ಟು, ನನ್ನ ತಮ್ಮಂದಿರೊಡನೆ 'ಇನ್ನೂ ಮಾವಿನೆಲೆ, ಚೆಂಡ್ಹೂವು ತರಲಿಲ್ಲವೆಂದು' ಜೋರಾಗಿ ಬಾಯಿ ಮಾಡುತ್ತ ಆಗಾಗ ಮನೆಯ ಮುಂಬಾಗಿಲಿಗೆ ಬಂದು ಬಯಲಿನೆಡೆಗೆ ಕಣ್ಣಾಡಿಸಿ 'ಯಾಕೋ ಕಾಣೆ, ಶಿವು ಇಷ್ಟೊತ್ತಾದ್ರೂ ಬರ್ಲಿಲ್ಲ' ಅನ್ನುತ್ತಿರುತ್ತಾಳೆ, ನೆನಪಿಸಿಕೊಂಡು ಮನಸು ಹಗುರಾಯ್ತು. ಆಟೋ ಸ್ಟಾಂಡಿನಲ್ಲಿ ನನ್ನ ಸಹಪಾಟಿಯಾಗಿದ್ದವನದೇ ಆಟೋ ಸಿಕ್ಕಿತು. ಅವನು ನನ್ನನ್ನು ನೋಡಿ ನಕ್ಕ, ಕುಶಲೋಪರಿ ವಿಚಾರಿಸಿದ. ನಾನು ಆಟೋ ಹತ್ತಿದೆ, ನಂತರ ಅವನು ಏನೋ ನೆನಪಾದವನಂತೆ "ನಿಮ್ಮನೆಯವರೆಲ್ಲ ಬೆಳಂಬೆಳಿಗ್ಗೆನೇ ದೊಡ್ಡಸ್ಪತ್ರೆಗೆ ಹೋದ್ರು" ಅಂದ. "ಯಾಕೆ?", "ಅಷ್ಟೆಲ್ಲ ಗೊತ್ತಿಲ್ಲಪ್ಪ. ನಾನೇ ಬೆಳಿಗ್ಗೆ ನಿಮ್ಮಪ್ಪ ಅಮ್ಮ ಅವ್ವ(ಅಜ್ಜಿ)ನನ್ನು ದೊಡ್ಡಾಸ್ಪತ್ರೆಗೆ ಬಿಟ್ಟುಬಂದೆ, ಯಾರಿಗೋ ಆಕ್ಸಿಡೆಂಟಾಗಿದೆ" ಅಂದ. ನನ್ನ ಹೃದಯ ಬಾಯಿಗೆ ಬಂತು. ಹಬ್ಬದ ದಿನವೇ ಆಕ್ಸಿಡೆಂಟ್! "ಎಂತಾ ಆಕ್ಸಿಡೆಂಟು?" "ಇಲ್ಲೇ ಮಾರ್ಕೆಟ್ ಮುಂದೆ, ಯಾರೂಂತ ಗೊತ್ತಿಲ್ಲ, ಬೈಕಾಕ್ಸಿಡೆಂಟು!" ನನ್ನಣ್ಣನ ನೆನಪಾಗಿ ನನ್ನ ಹೃದಯ ಢವಢವನೆ ಹೊಡೆದುಕೊಳ್ಳಲಾರಂಭಿಸಿತು. "ಹೌದಾ? ಹಾಗಾದ್ರೆ ದೊಡ್ಡಾಸ್ಪತ್ರೆಗೇ ನಡೀ.." ಅಂದೆ.

ಆಸ್ಪತ್ರೆ ತಲುಪುವ ಹೊತ್ತಿಗೆ, ರಾತ್ರಿ ಬಸ್ಸಿನ ಪ್ರಯಾಣದ ಅವಸರದಲ್ಲಿ ಏನೂ ತಿಂದಿಲ್ಲದ ಹೊಟ್ಟೆಯಿಂದಾಗಿಯೂ, ಈ ಗಾಬರಿಯಿಂದಾಗಿಯೂ ಎದೆಯುರಿ ಹತ್ತಿತು. ಆಸ್ಪತ್ರೆಯ ಮುಂದೆ ಆಟೋದಿಂದಿಳಿದು, ಸ್ನೇಹಿತನಿಗೆ ದುಡ್ಡುಕೊಟ್ಟು, ಆಸ್ಪತ್ರೆ ಕಾಂಪೌಡಿನೊಳಹೊಕ್ಕೆ. ಕಿವಿಯೊಳಗೆ ನನ್ನದೇ ಹೃದಯದ ಬಡಿತ ಕೇಳುತಿತ್ತು. ಕಾಂಪೌಂಡಿನೊಳಗೆ ಮರಗಳ ಕೆಳಗೆ, ಮುಚ್ಚಿರುವ ಬಾಗಿಲುಗಳ ವಾರ್ಡುಗಳ ಮೆಟ್ಟಿಲುಗಳ ಮೇಲೆ ನನಗೆ ಗೊತ್ತಿದ್ದ ಹುಡುಗರು ಕುಳಿತಿದ್ದರು, ಇವರೆಲ್ಲ ನಾನು ಓದಿದ ಕಾಲೇಜಿನಲ್ಲೇ ಈಗ ಇಂಜಿನಿಯರಿಂಗ್ ಮಾಡುತ್ತಿದ್ದವರು, ನನ್ನ ಮನೆಯ ಹತ್ತಿರದಲ್ಲೇ ರೂಮು ಬಾಡಿಗೆ ಹಿಡಿದಿರುವವರು ಹಾಗೂ ನಮ್ಮ ಮನೆಯಲ್ಲೇ ತಿಂಗಳೂಟಕ್ಕೆ ಇರುವವರು. ನಾನು ಬಂದುದನ್ನು ನೋಡಿ ಅವರಲ್ಲೊಬ್ಬ ಎದ್ದು ಬಂದ. ನಾನು ಹೂತುಹೋದ ಧ್ವನಿಯಲ್ಲಿ ಕಂಪಿಸಿದೆ, "ಏನಾಯ್ತು ರಾಘು?". "ರೆಡ್ಡಿಗೆ ಆಕ್ಸಿಡೆಂಟಾಗಿದೆ" "ಏನು?" "ರಾತ್ರಿ ಮಾರ್ಕೆಟ್ ರೋಡಿನಲ್ಲಿ.." "ಸರಿ, ಈಗ?" "ಈಗೇನೂ ಇಲ್ಲ, ಎಲ್ಲ ಮುಗಿದಾಯ್ತು. ರಾತ್ರಿ ಆಕ್ಸಿಡೆಂಟಾಗಿ ಹೊಯ್ಸಳದ(ಗಸ್ತುವಾಹನ) ಜೀಪಿಗೆ ಹಾಕುವಾಗಲೇ ಅವನಿಲ್ಲ!" ನನ್ನ ಮೈಯೆಲ್ಲ ಕಂಪಿಸಿತು, ಕಣ್ಣುರಿದು ತುಂಬಿಬಂದವು. "ಈಗೆಲ್ಲಿದಾನೆ?" "ಆ ಕಡೆ ಮಾರ್ಚುವರೀಲಿಟ್ಟಿದಾರೆ, ಪೋಸ್ಟ್‌ಮಾರ್ಟಂ ಎಲ್ಲಾ ಆಯ್ತು"

ನಾನು ಅತ್ತ ನಡೆದೆ, ಇನ್ನಿಬ್ಬರು ಹುಡುಗರು ಜೊತೆಯಾದರು, "ಆಂಟಿ, ಅಂಕಲ್, ಅಜ್ಜಿ ಎಲ್ಲ ಬಂದಿದ್ರು, ಈಗ ತಾನೇ ಹೋದ್ರು" ಶವಾಗಾರದ ಮುಂದೆ ಪೋಲಿಸು ನಿಂತಿತ್ತು, ಯಾರನ್ನೂ ಒಳಬಿಡುತ್ತಿರಲಿಲ್ಲ. "ಇದೆಲ್ಲ... ಹೇಗಾಯ್ತು?" "ಹೇಳ್ತೀನಿ ಬಾ. ಈವಾಗ ತಾನೇ ಬಸ್ಸಿಳಿದು ಬಂದಿದೀಯ ಅನ್ಸುತ್ತೆ, ಇಲ್ಲೇ ಹೋಟೆಲಿಗೆ ಹೋಗಿ ಮುಖತೊಳ್ಕೊಂಡು ಕಾಫಿ ಕುಡಿದು ಬರೋಣ. ಕಾಲೇಜು ಬಸ್ಸು ಬರುತ್ತೆ. ನಾವೆಲ್ಲ ಮೈಸೂರಿಗೆ ಹೋಗ್ತಿದೀವಿ, ಅವನ ಜೊತೆ." "ಅವನ ಮನೆಯವರಿಗೆ ತಿಳಿಸಿದ್ರಾ?" "ಅಲ್ಲಿದಾರೆ ನೋಡು ಅವರಪ್ಪ..." ಅವನು ಕೈಮಾಡಿದೆಡೆಗೆ ನೋಡಿದೆ. ಕುಳ್ಳಗೆ, ಸಣ್ಣಗೆ, ಅರೆನೆರೆತ ಬಕ್ಕತಲೆಯ ರೆಡ್ಡಿಯ ಅಪ್ಪ ಕೈಲೊಂದು ಕರ್ಚೀಫು ಆರ ಹಿಡಿದುಕೊಂಡು, ಕತ್ತೆತ್ತಿಕೊಂಡು ಪೋಲಿಸೊಬ್ಬನೊಂದಿಗೆ ಮಾತನಾಡುತ್ತಿದ್ದರು, ಕರ್ಚೀಫು ಒದ್ದೆಯಾಗಿತ್ತು.

ರೆಡ್ಡಿ, ಈ ಹುಡುಗರಂತೆಯೇ ಇಂಜಿನಿಯರಿಂಗ್ ಓದಲು ಮೈಸೂರಿನಿಂದ ಬಂದು, ನಮ್ಮ ಮನೆ ಹತ್ತಿರವೇ ಇವರೊಂದಿಗೆ ಇದ್ದ ಹುಡುಗ. ನಮ್ಮೆಲ್ಲರ ಉತ್ತಮ ಸ್ನೇಹಿತ, ಯಾರೂ ದ್ವೇಷಿಸಲು ಕಾರಣವೇ ಇಲ್ಲದಂತ ವ್ಯಕ್ತಿ, ತೆಳ್ಳಗಿನ ಮೈಕಟ್ಟು, ಗುಂಗುರು ಕೂದಲು, ಸ್ವಲ್ಪ ಗೂನು, ಕೀಚಲು ಧ್ವನಿ, ಅದಕ್ಕಿಂತ ಕೀಚಲಾದ, ಯಾವಾಗಲೂ ಅವನ ಮುಖದ ಮೇಲಿರುತ್ತಿದ್ದ ನಗು, ಓದಿನಲ್ಲಿ-ತನ್ನ ಬ್ರಾಂಚಿನಲ್ಲಿ ತಾನೇ ಮೊದಲು, ಸ್ನೇಹಿತರೆಲ್ಲರಿಗೂ ಬಿಟ್ಟಿ ಟ್ಯೂಟರ್, ದುಡ್ಡಿಲ್ಲದವರಿಗೆ ಕೈಲಿದ್ದ ದುಡ್ಡು, ಅವರ ಇಂಟರ್ನಲ್ಸಿಗೆ, ಪ್ರೊಜೆಕ್ಟ್ ವರ್ಕಿಗೆ ಹೆಲ್ಪರ್/ಗೈಡ್, ಕತ್ತಲೆಂದರೆ ಹೆದರಿಕೆ, ಹುಡುಗಿಯ ವಿಷಯ ತೆಗೆದರೆ

ನಾಚಿಕೆಯಿಂದ ಇನ್ನಷ್ಟು ದೊಡ್ಡದಾದ "ಕೆ.. ಕೆ.." ನಗು, ಇದೆಲ್ಲದರಲ್ಲಿ ಒಳಗೊಳಗೆ ನಾನು ಇವರಾರಿಗೂ ಕಮ್ಮಿಯಿಲ್ಲವೆಂದು ತೋರಿಸುವ ಸಣ್ಣಮಕ್ಕಳ ಹಂಬಲ, ಮತ್ತು ತೀರಾ ಇತ್ತೀಚೆಗೆ ಕಲಿತುಕೊಂಡಿದ್ದ ಬೈಕು!

ಕೊನೆಯ ಸೆಮಿಸ್ಟರ್‌ನ ಕೊನೆಯ ಎಕ್ಸಾಮ್ ಮುಗಿಸಿ ಕಾಲೇಜು ಹತ್ತಿರವೇ ಇರುವ ತನ್ನ ಸ್ನೇಹಿತರ ಹಾಸ್ಟೆಲಿಗೆ ಹೋಗಿದ್ದಾನೆ, ರಾತ್ರಿ ಮಾಡಿಕೊಂಡು ರೂಮಿನ ಹತ್ತಿರ ಬಂದರೆ ಉಳಿದ ರೂಮಿಗಳೆಲ್ಲ 'ಪೇಟೆ'ಗೆ ಹೋಗಿದ್ದಾರೆ. ಇವನು ಒಬ್ಬನೇ ಇರಲು ಬೇಜಾರಾಗಿ ಅಲ್ಲೇ ನಿಂತಿದ್ದ ತನ್ನ ಸ್ನೇಹಿತನೊಬ್ಬನ ಬೈಕು ತೆಗೆದುಕೊಂಡು ತಾನೂ 'ಪೇಟೆ'ಗೆ ಹೊರಟಿದ್ದಾನೆ, ಕೈಯಲ್ಲಿ ಲೈಸೆನ್ಸ್ ಇಲ್ಲ. ಪೇಟೆ ತಲುಪಿ, ಶುರುವಿನಲ್ಲೇ ಇರುವ ಮಾರ್ಕೆಟ್ಟಿನ ಹತ್ತಿರ ಎದುರು ಬರುತ್ತಿದ್ದ ವಾಹನಕ್ಕೆ ಎಡೆಕೊಡಲು ಹೋಗಿ, ರಸ್ತೆಪಕ್ಕದಲ್ಲಿ ನಿಂತಿದ್ದ ಲಾರಿಗೆ ಗುದ್ದಿದ್ದಾನೆ, ಎಷ್ಟು ವೇಗದಲ್ಲಿದ್ದನೋ, ಹೇಗಾಯ್ತೋ, ಏನಾಯ್ತೋ ಗೊತ್ತಿಲ್ಲ, ಅಲ್ಲಿದ್ದವರೆಲ್ಲ ಕೂಡಿ ಪೋಲಿಸರ ರಾತ್ರಿ ಗಸ್ತುವಾಹನ 'ಹೊಯ್ಸಳ'ಕ್ಕೆ (ಆಸ್ಪತ್ರೆಗೆ ಕರೆದೊಯ್ಯಲು) ಅವನನ್ನು ಎತ್ತಿ ಹಾಕಿದ್ದಾರೆ, ಅಷ್ಟೇ... ಎಲ್ಲ ಮುಗಿದಿದೆ...

ನಾವು ಹೋಟೆಲಿನಿಂದ ವಾಪ್ಸು ಬರುವಷ್ಟರಲ್ಲಿ ಕಾಲೇಜಿನ ಬಸ್ಸು ಬಂದಿತ್ತು. ಪ್ರಿನ್ಸಿಪಾಲರು ಬಂದಿದ್ದರು, ಒಂದಷ್ಟು ಜನ ಹುಡುಗಿಯರು, ಇನ್ನೂ ಒಂದಷ್ಟು ಜನ ಸ್ನೇಹಿತರು ಬಂದಿದ್ದರು, ಬಸ್ಸಿನೊಳಗೆ, ಆಚೀಚೆ ಬದಿಯ ಸೀಟುಗಳ ಮಧ್ಯೆ ಕೆಳಗೆ ನೆಲದಲ್ಲಿ, ಮಡಿಸಿಟ್ಟ ಸ್ಟ್ರೆಚರ್ ಮೇಲೆ ಬಿಳೀ ಬಟ್ಟೆ ಬಿಗಿದುಕೊಂಡು, ಅಲುಗಾಡಬಾರದೆಂದು ಸ್ಟ್ರೆಚರನ್ನು ಬಸ್ಸಿನ ಕಂಬವೊಂದಕ್ಕೆ ಕಟ್ಟಿಸಿಕೊಂಡು, ಮೂಗಿಗೆ ಹತ್ತಿಯಿಟ್ಟುಕೊಂಡು ಸಣ್ಣ ಹಕ್ಕಿಯಂತೆ ಮಲಗಿದ್ದ ನಮ್ಮ ರೆಡ್ಡಿ. ಅದನ್ನು ನೋಡುತ್ತಲೂ ಮತ್ತೆಲ್ಲ ಹುಡುಗ-ಹುಡುಗಿಯರು ಭೋರೆಂದರು. ನೋಡಲು ಅಲ್ಲಿಗೆ ಬಂದಿದ್ದ ನನ್ನ ತಮ್ಮನಿಗೆ ನನ್ನ ಬ್ಯಾಗು ಕೊಟ್ಟು, ಮನೆಗೆ ಹೋಗಲು ಹೇಳಿ ನಾನೂ ಬಸ್ಸಿನಲ್ಲಿ ಕುಳಿತೆ, ರೆಡ್ಡಿಯನ್ನು ಮೈಸೂರಿಗೆ ತಲುಪಿಸಿಬರಲು.

ಮರುದಿನ ಬೆಳಿಗ್ಗೆ ಬಂದು ಮನೆಯ ಬಾಗಿಲು ತಟ್ಟಿದೆ. ಮನೆಯ ಮುಂಬಾಗಿಲಿನಲ್ಲಿ ಹಸಿರು ತೋರಣವಿರಲಿಲ್ಲ. ಹೊಸ್ತಿಲಿನಲ್ಲಿ ನಿನ್ನೆ ಇಟ್ಟಿರಬೇಕಾಗಿದ್ದ ಸಗಣಿ-ಚೆಂಡುಹೂವಿನ ಕೆರ್ಕಗಳೂ, ದೀಪಗಳೂ ಇರಲಿಲ್ಲ. ಬಾಗಿಲು ತೆರೆದವಳೇ ಕೆಂಪು ಕಣ್ಣಿನ ನನ್ನಮ್ಮ ನನ್ನನಪ್ಪಿಕೊಂಡು ಜೋರಾಗಿ ಅತ್ತಳು. "ಯಾವಾಗ್ಲೂ ಆಂಟೀ... ಆಂಟೀ... ಅಂತಾ ಹಿಂದೆ-ಮುಂದೇನೇ ಅಲೀತಿದ್ದ, ಬೈಕು ಅಷ್ಟೊಂದು ಜೋರಾಗಿ ಓಡಿಸ್ಬೇಡ್ವೋ ರೆಡ್ಡಿ ಅಂದ್ರೆ ನಾ ಸತ್ರೆ ನಮ್ಮನೇಲಿ ನನ್ತಮ್ಮ ಇದಾನಾಂಟಿ ಅಂದು ನನ್ನೈಲಿ ಬೈಸ್ಕತಿದ್ದ, ಊಟ ತಿಂಡಿಯಲ್ಲಿ ಯಾವತ್ತೂ ಕಿರಿಕಿರಿಯಿಲ್ಲ, ಏನಾದ್ರೂ ಹೆಚ್ಚುಕಡಿಮೆಯಾದ್ರೂ ಪರ್ವಾಗಿಲ್ಲ ಬಿಡಿ ಆಂಟಿ, ನಮ್ಮನೇಲಿ ಈ ತರಾ ಆದ್ರೆ ತಿನ್ದೇ ಬಿಡ್ತಿದ್ವಾ ಅಂತಿದ್ದ... " ನಿನ್ನೆ ಒಂದು ದಿನದಲ್ಲಿ ಅವನೆಲ್ಲ ಸ್ನೇಹಿತರಿಂದ ಅವನ ಸಾವಿರಾರು ನೆನಪಿನ ಚಿತ್ರಗಳು, ಮತ್ತು ಅವೆಲ್ಲವನ್ನೂ ಪೂರ್ಣಗೊಳಿಸಲು ಈಗ ನನ್ನಮ್ಮನ ನೆನಪಿನ ಚಿತ್ತಾರ...

ಇದೆಲ್ಲ ಆಗಿ ಮೂರುವರ್ಷಗಳೇ ಆಗಿವೆ, ಮೊನ್ನೆ ನಾನು ಓದಿದ ಸ್ಕೂಲಿನ 'ಹಳೇ ವಿದ್ಯಾರ್ಥಿಗಳ ಕೂಟ'ಕ್ಕೆ ಹೋಗಬೇಕೆಂದು ನನ್ನ ಸ್ನೇಹಿತರೊಡನೆ ಮಾತನಾಡುತ್ತಿರುವಾಗ ವಿಷಯವೊಂದು ತಿಳಿದುಬಂದು ಎಲ್ಲವೂ ಮರುಕಳಿಸಿದಂತಾಯ್ತು. 'ತಿಲಕ್ ಪ್ರಭು ಹೋಗಿಬಿಟ್ಟ!' ನಾನು ಓದಿದ ಈ ವಸತಿ ಶಾಲೆಯಲ್ಲೇ ಓದಿದ ತಿಲಕ್ ನನಗಿಂತ ಎರಡು ವರ್ಷ ಜೂನಿಯರ್, ಅದ್ಭುತವಾದ ಹಾಡುಗಾರ, ನಡೆಯುತಿದ್ದ ಬಹುತೇಕ ಹಾಡುಗಾರಿಕೆಯ ಸ್ಪರ್ಧೆಗಳಲ್ಲಿ ಗೆಲ್ಲುತಿದ್ದವನು, ಅವನ ಹತ್ತಿರವಿದ್ದ ದಪ್ಪನೆಯ ಡೈರಿಯಲ್ಲಿ ಇನ್ನೂರೈವತ್ತಕ್ಕೂ ಹೆಚ್ಚು ಹಾಡುಗಳು, ಆ ಸಮಯದಲ್ಲಿ ನಾನೂ ಹಾಡುತ್ತಿದುದರಿಂದ(!) ನನಗೂ ಉತ್ತಮ ಸ್ನೇಹಿತ. ಅವನು ಮೊಟ್ಟ ಮೊದಲು ಹಾಡಿದ ಹಾಡು, "ಮಾಮರದ ತಂಪಿಗೆ ಕೂತಿರುವ ಗಿಳಿಗಳೇ, ಬನ್ರವ್ವಾ ನನ್ನ ಕಳಿಸೋಕೆ..", ಸಕ್ಕತ್ ಹೈ ಪಿಚ್‌ನಲ್ಲಿ ಹಾಡುತ್ತಿದ್ದ, "ಮೇರೆ ನೈನಾ ಸಾವನ್ ಬಾಧೋ..", "ಮೇರಾ ಜೀವನ್ ಕೋರಾ ಕಾಗಜ್.." ನನಗೆ ಅತೀ ಇಷ್ಟವಾಗಿದ್ದ "ಶಂಭೋ ಮಹಾದೇವ, ಅಂಬಾ ಮನೋಭಾವ, ಬ್ರಹ್ಮಾದಿ ಸುರಶ್ರೇಷ್ಠ.." ಹಾಡುಗಳು... ಎಲ್ಲವೂ ಅವನ ನೆನಪಿನ ಚಿತ್ರವನ್ನು ಕಟ್ಟಿಕೊಟ್ಟವು. ಇಲ್ಲಿಗಾಗಲೇ ಈ ಸ್ಕೂಲು ಬಿಟ್ಟು ಎಂಟು ವರ್ಷವಾಗಿದೆ, ಹೊರಬಂದು ಕಾಲೇಜು ಸೇರಿ, ಡಿಗ್ರಿ ಮುಗಿಸಿ, ಯಾವುದೋ ಒಂದು ಚಿಟ್ಸ್ ಕಂಪನಿಯಲ್ಲಿ ಕೆಲಸ ಹುಡುಕಿಕೊಂಡು... ಎಲ್ಲವೂ ಸರಿಯಾಗಿ ನಡೆಯುತ್ತಿರುವಾಗ ನಡೆಯಬಾರದ್ದೊಂದು ನಡೆದು ಕೋಲಾರದಾಚೆಯಲ್ಲಿ ಬೈಕ್ ಆಕ್ಸಿಡೆಂಟ್‌ನಲ್ಲಿ 'ತಿಲಕ್' ಇನ್ನಿಲ್ಲ!

ಅಲ್ಯುಮ್ನಿ ಮೀಟ್‌ನಲ್ಲಿ ಅವನ ತರಗತಿಯ ಸ್ನೇಹಿತನೊಬ್ಬ ಸಮಾರಂಭದ ವೇದಿಕೆಗೆ ಬಂದು, ವಿಷಯ ಹೇಳಿ, ಮುಂದೇನೂ ಮಾತನಾಡಲಾಗದೇ ಗದ್ಗದಿತನಾದ. ಆಮೇಲೆ ಒಂದು ನಿಮಿಷದ ಮೌನಾಚರಣೆಗೆ ವಿನಂತಿಸಿಕೊಂಡ, ಮೌನಾಚರಣೆಯ ನಂತರವೂ ಏನನ್ನೂ ಮಾತನಾಡಲಾಗದೇ ಸಾರಿ ಎಂದಿಳಿದು ಹೋದ ಮತ್ತು ಎಲ್ಲರ ಹೃದಯ ಭಾರವಾಗುವಂತೆ ಮಾಡಿದ...

ಯಾವಾಗಲೂ ಕೆಲವು ಸಾವುಗಳು, ಕೆಲವರನ್ನು ಮಾತ್ರ ಕಾಡುತ್ತವೆ, ಇನ್ನುಳಿದವರಿಗೆ ಅವು ಕೇವಲ ಸುದ್ದಿ ಮಾತ್ರ. ಇರಾಕ್‌ನಲ್ಲಿ ಬಾಂಬ್ ಸಿಡಿದು ಹತ್ತಾರು ಜನ ಸತ್ತರೆ ನಮಗೇನೂ ಅನಿಸುವುದಿಲ್ಲ, ಟೀವಿ ಪರದೆಯ ಮೇಲೆ ಅಮೇರಿಕಾದ

ಕತ್ರಿನಾ, ತಮಿಳುನಾಡಿನ ಸುನಾಮಿಗಳೆಲ್ಲ ನಮಗೆ ಬರಿಯ ಸುದ್ದಿಗಳು, ಅಷ್ಟು ದೂರವೆಲ್ಲ ಏಕೆ? ಇಲ್ಲೇ ಬೆಂಗಳೂರಿನಲ್ಲಿ ದಿನಾ ಆಕ್ಸಿಡೆಂಟು, ಕೊಲೆ, ಸಾವುಗಳೆಂದು ನಿಧನವಾದವರದ್ದೂ ನಮಗೆ ಬರಿಯ ಸುದ್ದಿಯೇ... ನಮಗೆ ಗೊತ್ತಿಲ್ಲದ, ಪರಿಚಯವಿಲ್ಲದ, ಸಂಬಂಧವಿಲ್ಲದ ಸಾವು–ನೋವುಗಳೆಲ್ಲ ನಮಗೆ ಬರಿಯ ಸುದ್ದಿ ಮಾತ್ರ. ಎಲ್ಲೋ ಕೆಲವು ಸಾವುಗಳು ಸ್ವಲ್ಪ ಸಮಯ ನಮ್ಮ ಮನಸು ತಾಕಿದರೂ ಆನಂತರ ನಾವೆಲ್ಲ ನಿರಾಳ... ವಿಲ್ಸನ್‌ಗಾರ್ಡನ್ನಿನ ತಿರುವಿನಲ್ಲಿ ಬಿಟಿಎಸ್ ಬಸ್ಸು ಸ್ಲೋ ಆದಾಗ ಕಾಣುವ ಎಳೇ ಯುವಕನ ಶವಯಾತ್ರೆ, ಬೀಳೀ ಬಟ್ಟೆ, ಹೂವಿನ ಹೊರೆಹೊತ್ತುಕೊಂಡು ಮಲಗಿರುವ ಯುವಕ, ಕಣ್ಣೀರು, ಸಿಂಬಳ ಸೀಟಿಕೊಂಡು, ಕೈಯಲ್ಲಿ ಮಡಕೆ ತೂಗಿಸಿಕೊಂಡು ಮುಂದೆ ಹೆಜ್ಜೆಹಾಕುತ್ತಿರುವ ವೃದ್ಧ ಅಪ್ಪ, ಅವರ ಹಿಂದೆ ಶೋಕತಪ್ತ ಬಂಧುಗಳು, ಬಸ್ಸಿನಲ್ಲಿದ್ದವರೆಲ್ಲ ಎದ್ದು, ಬಾಗಿ, ಕಿಟಕಿಯಿಂದಾಚೆ ಇಣುಕಿ, ಲೊಚಗುಟ್ಟಿ, ತಲೆಗೊಂದರಂತೆ ಮಾತನಾಡಿ, ರಿಚ್‌ಮಂಡ್ ಸರ್ಕಲ್ ಬರುವಷ್ಟರಲ್ಲಿ ಎಲ್ಲ ಮರೆತು ತಮ್ಮದೇ ದೈನಿಕ ಹಳವಂಡಗಳನ್ನು ನೆನಪಿಸಿಕೊಳ್ಳುತ್ತ ಬಸ್ಸಿಳಿದು–ಹತ್ತಿಹೋಗುವಂತೆ.. ಕೆಲವು ಸಾವುಗಳು ಕೇವಲ ಸುದ್ದಿಮಾತ್ರ...

ಪ್ರಕೃತಿ ನಿಯಮ ಹೀಗಿರುವುದಕ್ಕೇ ಥ್ಯಾಂಕ್ ಗಾಡ್! ಇಲ್ಲದಿದ್ದರೆ ಕಲ್ಪಿಸಿಕೊಳ್ಳಲೂ ಭಯವಾಗುತ್ತದೆ. ಪ್ರತೀದಿನ ಪ್ರತೀಮನೆಯಲ್ಲೂ ಸೂತಕ, ದುಃಖ, ಶೋಕಾಚರಣೆ, ಪ್ರತಿಯೊಂದು ಸಾವೂ ಪ್ರತಿಯೊಬ್ಬರಿಗೂ ನೋವೇ... ಬೇಡವೇ ಬೇಡ.

ಕೊನೆಯದಾಗಿ... ಇವೆರಡು ಸಾವುಗಳು ನನಗೆ ಬರಿಯ ಸುದ್ದಿಗಳಲ್ಲ, ನಿಜವಾದ ನೋವುಗಳು, ಅದಕ್ಕಾಗೇ ಈ ಬರಹ, ಅದಕ್ಕಾಗೇ ಈ ನೆನಪು ಮತ್ತು ನೆನಪಿನ ಚಿತ್ತಾರಗಳು... ಬೆಳ್ಳಂಬೆಳಿಗ್ಗೇನೆ ಸಾವು–ನೋವಿನ ವಿಷಯ ಮಾತಾಡ್ತಾ ಇದೀನಿ, ದಯವಿಟ್ಟು ಕ್ಷಮಿಸಿ. ಸಾವಿನ ಅನಿರೀಕ್ಷಿತತೆ, ಅನೂಹ್ಯತೆ, ನಿಷ್ಠುರತೆ, ನಿಷ್ಕಾರುಣ್ಯತೆ ನಮಗೆ ಈ ಬದುಕನ್ನು ಇನ್ನೂ ಆನಂದವಾಗಿ, ಅರ್ಥಪೂರ್ಣವಾಗಿ ಜೀವಿಸಲು ಪ್ರೇರೇಪಿಸಲಿ...